ಯಾರದ್ದೋ ದನ, ಯಾರಿಗೋ ಹಾಲೋ? ಸೋಜಿಗವೆನಿಸಿತು ವಿಷ್ಣುವಿಗೆ. ಕೃಷ್ಣಾವತಾರದ ತನ್ನ ದಿನಗಳ ನೆನಪಾಯಿತು. ಕರುಗಳು ಹೊಟ್ಟೆ ತುಂಬ ಹಾಲುಂಡು ಬಿಟ್ಟು ಹೋದ ಮೇಲೆ ಗೋಪಾಲಕಿಯರು ಮಿಕ್ಕಿದ ಹಾಲು ಕರೆಯುತ್ತಿದ್ದದ್ದು. ಮನೆಯ ಮಕ್ಕಳು ಕುಡಿದ ಮೇಲೆ ಉಳಿದದ್ದು ಮಾರಾಟಕ್ಕೆ ಎನ್ನುವುದೇ ತಮ್ಮ ನಿಯಮವಾಗಿತ್ತು. ಈಗ ಕರುವಿನ ಬದಲಿಗೆ ಮೊಲೆಚೀಪಿ ಹಾಲು ಬರಿಸಲು ಯಾವುದೋ ಆಟಿಕೆ ಬಂದಿದೆ. ಮನೆಯ ಮಕ್ಕಳಿಗೆ ಡಬ್ಬಿಯ ಹಾಲು. ದನದ ಹಾಲು ಪೂರ್ತಿಯಾಗಿ ಮಾರಾಟಕ್ಕೆ!

ಮಾನವರು ಅತಿ ಬುದ್ಧಿವಂತರಾಗಿ ಅಧರ್ಮದಿಂದ ವ್ಯವಹರಿಸುತ್ತಿದ್ದಾರೆಯೇ? ಧರ್ಮವನ್ನು ಪುನಃ ಸ್ಥಾಪಿಸುವ ಅಗತ್ಯ ಉಂಟಾಗಿದೆಯೇ? ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ ಅಂತ ನಾನು ಹೇಳಿದ್ದು ಇಲ್ಲಿ ನೂರುಕೋಟಿ ಜನರಿಗೂ ಗೊತ್ತಿದೆ. ಆದರೂ ಜನರೆಲ್ಲ ದೇವರುಗಳನ್ನು ತಮಗೆ ಬೇಕಾದ ಹಾಗೆ ಕಂಕುಳೆಡೆಯಲ್ಲಿ ಸಿಕ್ಕಿಸಿಕೊಂಡೇ ವ್ಯವಹರಿಸುತ್ತಿದ್ದಾರೆಯೇ? ಕಲ್ಕಿಯ ಅವತಾರಕ್ಕೆ ಕಾಲ ಕೂಡಿ ಬಂದಾಯ್ತೇ?

ಹೀಗೆ ಕಿಟಕಿಯಿಂದ ಒಂದಿಷ್ಟು ಮಂದಿಯನ್ನು ಇಣುಕಿ ನೋಡಿ ಮಾಡುವ ಆತುರದ ನಿರ್ಧಾರವೇ ಅದು? ಮಹತ್ತರವಾದ ನಿರ್ಧಾರ. ಆಮೂಲಾಗ್ರವಾಗಿ ಪರಿಶೋಧಿಸಿ ನಿರ್ಣಯಕ್ಕೆ ಬರಬೇಕಾದ ಹೊಣೆ ತನ್ನದು. ಲಕ್ಷ್ಮಿಯೊಂದಿಗೆ ವೈಕುಂಠ ಬಿಟ್ಟು ಹೊರಟಾಗಲೇ ಹಾಕಿಕೊಂಡಿದ್ದ ಸೀಕ್ರೆಟ್ಟಾದ ಅಜೆಂಡಾ. ಪಾಪ... ಲಕ್ಷ್ಮಿ ಜಾತ್ರೆಗೇ ಬಂದದ್ದು ಅಂತ ತಿಳಿದುಕೊಂಡಿದ್ದಾಳೆ. ಆಕೆಗೂ ಗೊತ್ತಾಗದಂತೆ ಎಚ್ಚರ ವಹಿಸಿ ಹಾಕಿಕೊಂಡ ಕಾರ್ಯಕ್ರಮ... ಸದ್ದಾಗದಂತೆ ಗರ್ಭಗುಡಿಯ ಹೊರಗೆ ಬಂದು ಬಾಗಿಲೆಳೆದು ತನ್ನನ್ನು ಯಾರಾದರೂ ಗುರುತು ಹಚ್ಚದಂತೆ ಕ್ಷಣಮಾತ್ರದಲ್ಲಿ ಹಳ್ಳಿಯವನ ಮಾರುವೇಷಕ್ಕೆ ಬದಲಾಯಿಸಿಕೊಂಡು ರಸ್ತೆಗಿಳಿದ ವಿಷ್ಣು.

**ನಾವು ದೇವರುಗಳು? ವಿಶ್ವನಾಥ ಕಾಶಿಯಲ್ಲಿ, ದೇವಿ ಕೊಲ್ಲೂರಲ್ಲಿ, ತಿಮ್ಮಪ್ಪ ತಿರುಪತಿಯಲ್ಲಿ, ಅಯ್ಯಪ್ಪ ಕೇರಳದಲ್ಲಿ ಉಳಕೊಳ್ಳುವ ಅವಶ್ಯಕತೆಯೇನಿದೆ? ಎಲ್ಲಾದರೂ ಒಂದೈದೆಕರೆ ಜಾಗದಲ್ಲಿ ಸರ್ವದೇವ ಮಂದಿರ ಕಟ್ಟಿಕೊಂಡು ಹೀಗೆಯೇ ಒಂದೇ ಕಡೆ ಭಕ್ತರ ಇಷ್ಟಾರ್ಥ ಪೂರೈಸಿಕೊಡುತ್ತ ಇರುವುದು ಒಳ್ಳೆಯದಲ್ಲವೇ?**

★★★

'ಏಯ್... ಬೆಳಗಾತ ಎದ್ದು ವೈಕುಂಠಕ್ಕೆ ಹೊರಟಿಯೇನೋ... ಮುಂದೆ ನೋಡ್ಕೊಂಡು ನೇರ ನಡೆಯಲೇ...' ರಸ್ತೆಯ ಹೊಂಡ ತಪ್ಪಿಸಲು ರಸ್ತೆ ಬಿಟ್ಟು ಫುಟ್‌ಪಾತಿನ ಅಂಚಿಗೆ ಬಂದಿದ್ದ ಆಟೊದವ ಮತ್ತು ಫುಟ್‌ಪಾತಿನ ಗಲೀಜು ತಪ್ಪಿಸಲು ರಸ್ತೆಯಂಚಿಗೆ ಇಳಿದಿದ್ದ ವಿಷ್ಣು ಪರಸ್ಪರ ಮುಖಾಮುಖಿಯಾಗಿದ್ದರು. ಕೂಡಲೇ ಬದಿಗೆ ಸರಿಯದೆ ಎದುರು ಅಲ್ಲೇ ನಿಂತದ್ದೇ ಮಹಾಪರಾಧ ಎನ್ನುವಂತೆ ಆಟೊದವ ಸಿಡುಕಿ ನುಡಿದ. ಹಣೆಯಲ್ಲಿ ಕುಂಕುಮ, ಗಂಧ ಲೇಪಿಸಿಕೊಂಡಿದ್ದ... ಆಟೊದ ಬೆನ್ನಲ್ಲಿ 'ಗರುಡವಾಹನ' ಎಂದು ಬೋರ್ಡು ಬೇರೆ ಬರೆಸಿಕೊಂಡಿದ್ದ. ವಿಷ್ಣುವಿಗೆ ನಗು